ಆ) ಗ್ರಾಮಸಹಾಯಕರ ಬೇಡಿಕೆಯಂತೆ ವೇತನವನ್ನು ಪರಿಷ್ಕರಿಸಲಾಗಿದೆ,

ಇ) ಗ್ರಾಮಸಹಾಯಕರ ಬೇಡಿಕೆಯಂತೆ ಅವರನ್ನು ಸರಕಾರಿ ನೌಕರರನ್ನಾಗಿ ಪರಿಗಣಿಸಿ ಸರಕಾರಿ ನೌಕರರ ಸೌಲಭ್ಯವನ್ನು ನೀಡುವುದಲ್ಲದೆ ಅವರ ಸೇವೆಯನ್ನು ಖಾಯಂ ಮಾಡಲಾಗುವುದೆ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

ಅ) ಗ್ರಾಮಸಹಾಯಕರಿಗೆ ತಿಂಗಳಿಗೆ ರೂ. ೧೨೦,೧೦ ಗಳ ಸಂಭಾವನೆ ನೀಡಲಾಗುತ್ತಿದೆ. ಆದರೆ ಜೀತಪದ್ಧತಿಯಂತೆ ದುಡಿಸುತ್ತಿರುವುದು ನಿಜವಲ್ಲ.

ಆ) ಗ್ರಾಮಸಹಾಯಕರ ಸಂಭಾವನೆಯನ್ನು ಪರಿಷ್ಕರಿಸುವ ಯಾವ ಪ್ರಸ್ತಾಪನೆಗಳೂ ಸರ್ಕಾರದ ಮುಂದಿಲ್ಲ.

ಇ) ಗ್ರಾಮಸಹಾಯಕರನ್ನು ಸರ್ಕಾರದ 'ಡಿ' ಗ್ರೂಪ್ ನೌಕರರೆಂದು ಪರಿಗಣಿಸುವ ಹಾಗೂ ತತ್ಸಮಾನವಾದ ವೇತನದ ಶ್ರೇಣಿಯ ಸೌಲಭ್ಯವನ್ನು ವಿಸ್ತರಿಸುವ ವಿಷಯವು ಸರ್ಕಾರದ ಪರ್ಯಾಲೋಚನೆಯಲ್ಲಿದೆ.

೧೯೮೩ ರಲ್ಲಿ ಘಟಪ್ರಭಾ ನದಿಯಿಂದ ಮಹಾ ಪೂರದಿಂದನೊಂದ ಕುಟುಂಬಗಳಿಗೆ ಮನೆ ಕಟ್ಟಿಸಿ ಕೊಡುವ ಬಗ್ಗೆ.

೯೩೭. ಶ್ರೀ ಬಿ. ಜಿ. ಜವಳಿ (ಮುಧೋಳ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಮುಧೋಳ ತಾಲ್ಲೂಕಿನ ನಂದಗಾಂವ ಮತ್ತು ಚಿನ್ನಾಳ ಗ್ರಾಮಕ್ಕೆ ೧೯೮೩ರಲ್ಲಿ ಘಟಪ್ರಭಾ ನದಿಗೆ ಮಹಾಪೂರ ಬಂದಾಗ ಎಷ್ಟು ಕುಟುಂಬಗಳು ನಿರಾಶ್ರಿತರಾದರು.

ಆ) ಎಷ್ಟು ಮನೆಗಳು ಜಖಂಗೊಂಡವು.

ಇ) ಈಗ ಎಷ್ಟು ಮನೆಗಳನ್ನು ಕಟ್ಟಿಸಿ ಕೊಡಲಾಗಿದೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

ಅ) ೧೯೮೩ರಲ್ಲಿ ಘಟಪ್ರಭಾ ನದಿಯಿಂದ ಮಹಾಪೂರ ಬಂದುಚಿನ್ನಾಳ ಗ್ರಾಮದಲ್ಲಿ ೫೭ಕುಟುಂಬಗಳು ಮತ್ತು ನಂದಗಾಂವ ಗ್ರಾಮದ ೨೪ ಕುಟುಂಬಗಳು ಮತ್ತು ತೊಂದರೆಗೀಡಾದವು,

ಆ) ಚಿನ್ನಾಳ ಗ್ರಾಮದ ೫೨ ಮನೆಗಳು ಹಾಗೂ ನಂದಗಾಂವ ಗ್ರಾಮದ ೯ ಮನೆಗಳು ಜಖಂಗೊಂಡವು.

ಇ) ಚಿನ್ನಾಳ ಗ್ರಾಮದಲ್ಲಿ ೧೨೦ ಜನತಾ ಮನೆಗಳು ಮತ್ತು ನಂದಗಾಂವ ಗ್ರಾಮದಲ್ಲಿ ೧೧೦ ಜನತಾ ಮನೆಗಳನ್ನು ಕಟ್ಟಿಸಿಕೊಡಲು ಕ್ರಮ ಕೈಕೊಂಡಿದ್ದು, ಈಗಾಗಲೇ ಕ್ರಮವಾಗಿ ೫೨ ಮತ್ತು ೪೪ ಮನೆಗಳನ್ನು ಕಟ್ಟಿಯಾಗಿದೆ.

ದೇವನ ಹಳ್ಳಿ ತಾಲ್ಲೂಕಿನ ವಿಫಲ ಭಾವಿಗಳ ಬಗ್ಗೆ,

೧೬೪೩. ಶ್ರೀ ಮುನಿಸ್ವಾಮಿಯಪ್ಪ ಪಿ.ಸಿ. (ದೇವನಹಳ್ಳಿ).— ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ದೇವನ ಹಳ್ಳಿ ತಾಲ್ಲೂಕಿನಲ್ಲಿ ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನಿಂದ ಸಾಲ ಪಡದು ಭಾವಿ ತೋಡಿಸಿ ವಿಫಲವಾಗಿರುವ ಬಾವಿಗಳ ಸಂಖ್ಯೆ ಎಷ್ಟು ?

ಆ) ಇದರಲ್ಲಿ ಹರಿಜನ ಗಿರಿಜನ ಪ್ರಮಾಣ ಎಷ್ಟು ಹಾಗೂ ಇದುವರೆಗೂ ಎಷ್ಟು ವಿಫಲವಾದ ಬಾವಿಗಳಿಗೆ ಸಾಲ ಮನ್ನಾ ಮಾಡಲಾಗಿದೆ ?

ಇ) ಇನ್ನುಳಿದಿರುವ ವಿಫಲವಾದ ಬಾವಿಗಳ ವಿಲೇವಾರಿ ಆಗದೆ ಇರತಕ್ಕಂಥಹ ಅರ್ಜಿಗಳ ಸಂಖ್ಯೆ ಎಷ್ಟು ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—

ಅ) ನಿಜ.

ಆ) ಇದರಲ್ಲಿ ಹರಿಜನ ಗಿರಿಜನ ಪ್ರಮಾಣ ಶೇ. ಇದುವರೆಗೂ ಹರಿಜನ ಗಿರಿಜನರ ೩ ಬಾವಿಗಳಿಗೆ ಸಾಲ ಮಂಜೂರು ಮಾಡಲಾಗಿದೆ.

ಇ) ವಿಲೇವಾರಿ ಆಗದೆ ಇನ್ನುಳಿದಿರುವ ವಿಫಲವಾದ ಬಾವಿಗಳ ಅರ್ಜಿಗಳು ೩೯.

ಗಂಲ್ಬರ್ಗ ಜಿಲ್ಲೆ ಯಾದಗಿರಿ ತಾಲ್ಲೂಕಿನ ಕೊನೇಕಲ್ ಗ್ರಾಮದಲ್ಲಿ ವಿದ್ಯುತ್ ಉಪ-ವಿಭಾಗ ಸ್ಥಾಪಿಸುವ ಬಗ್ಗೆ.

೯೮೭. ಶ್ರೀ ಮಲ್ಲಿಕಾರ್ಜುನ ಖರ್ಗೆ. (ಗುರುಮಿಟ್ಕಲ್).— ಮಾನ್ಯ ವಿದ್ಯುತ್, ಗಣಿ ಮಂತ್ರಿ ಹಾಗೂ ವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗುಲ್ಬರ್ಗ ಜಿಲ್ಲೆಯ ಯಾದಗೀರ್ ತಾಲ್ಲೂಕಿನ ಕೊನಕಲ್ ಗ್ರಾಮದಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಒಂದು ಸಬ್‌ಸ್ಟೇಷನ್ ಸ್ಥಾಪಿಸುವ ಕಾರ್ಯ ಕೈಗೊಂಡಿರುವುದು ನಿಜವೆ ?

ಆ) ಯಾವಾಗಿನಿಂದ ಈ ಕಾರ್ಯ ಮಂಜೂರುಮಾಡಿದೆ.

ಇ) ಸರ್ಕಾರಕ್ಕೆ ಹಿಂದೆ ಏನಾದರೂ ಈ ಕಾರ್ಯವನ್ನು ಮುಂದಿಸಲು ಮನವಿ ಬಂದಿತ್ತೆ ?

ಈ) ಹಾಗಾದರೆ ಮನವಿ ಬಗ್ಗೆ ಕೈಗೊಂಡ ಕ್ರಮ.

ಉ) ಗುಲ್ಬರ್ಗ ಜಿಲ್ಲೆಯ ಯಾದಗೀರ್ ತಾಲ್ಲೂಕಿನ ಕೊನಕಲ್ ಗ್ರಾಮದಲ್ಲಿ ಸಬ್ ಸ್ಟೇಷನ್ ಕಾರ್ಯವನ್ನು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಯಾವಾಗ ಮುಗಿಸುವುದು.

ಶ್ರೀ ಜಿ. ಎಸ್. ದೇಶ್‌ಮುಖ್ (ವಿದ್ಯುತ್, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು).—

ಅ) ನಿಜ.

ಆ) ೨೭-೭-೧೯೮೨ ರಿಂದ ಈ ಕಾರ್ಯ ಪ್ರಾರಂಭವಾಗಿದೆ.

ಇ) ಸರ್ಕಾರಕ್ಕೆ ಈ ಬಗ್ಗೆ ಮನವಿ ಬಂದಿಲ್ಲ.

ಈ) (ಇ) ಪ್ರಶ್ನೆಯು ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ೬-೯-೧೯೮೫ರಲ್ಲಿ ಕೊನಕಲ್ ಗ್ರಾಮದಲ್ಲಿ ಒಂದು ೫ ಎಂ.ವಿ.ಎ. ಸಾಮರ್ಥ್ಯದ ಸಬ್ ಸ್ಟೇಷನ್ ಕಾರ್ಯ ಮುಗಿದಿದೆ.

Regarding Iron ore leases details.

911. SRI MOHAMMED MOINUDDIN (Chamrajpet).— Will the Minister for Power, Mines and Geology be pleased to state.—

(a) Whether it is a fact that Iron Ore deposit sites in the State have been leased for mining to Central Government undertaking/ State Government under-taking/Private persons/Joint Sector under-taking ?

(b) If so details may be furnished in the proforma given below.

SRI G. S. DESHMUKH (Minister for Power, Mines and Geology).—

(a) Yes.

(b) The details are given in the enclosed proforma.